## 7 ಅಡಿ ಉದ್ದದ ಜಡೆ

ಶಾಂತಿನಾಥ ಸರಸ್ವತಿ ಸ್ವಾಮೀಜಿ ಅವರ ಜನ್ಮಭೂಮಿ ಕೇರಳ. ಅಲ್ಲಿಯೇ ಅವರು ಪೂರ್ವಾಶ್ರಮದಲ್ಲಿ ಜೀವನ ಸಾಗಿಸಿಕೊಂಡಿದ್ದರು. ಅಧ್ಯಾತ್ಮದತ್ತ ಮನಸ್ಸು ವಾಲಿದ್ದರಿಂದ ಸನ್ಯಾಸ ದೀಕ್ಷೆ ಸ್ವಿಕರಿಸಿ ಈಗ ಉತ್ತರ ಭಾರತದಲ್ಲಿ ಸನ್ಯಾಸಿಯಾಗಿ ಜೀವನ ಸಾಗಿಸತೊಡಗಿದ್ದಾರೆ.

ಇವರು ಉತ್ತಮ ಗಾಯಕರು. ಬಹುಭಾಷ ಜ್ಞಾನಿಗಳು. ತುಳು, ಕನ್ನಡ, ಮಲಯಾಳಂ, ತಮಿಳು, ತೆಲುಗು, ಮರಾಠಿ, ಹಿಂದಿ, ಗುಜರಾತಿ ಭಾಷೆ ಬಲ್ಲವರಾಗಿದ್ದಾರೆ. ಶ್ರೀಗಳು ಕಳೆದ 12 ವರ್ಷಗಳಿಂದ ತಲೆಗೂದಲಿಗೆ ಕತ್ತರಿ ಪ್ರಯೋಗ ಮಾಡಿಸಿಕೊಂಡಿಲ್ಲ. ಹಾಗಾಗಿ ಅವರ ಕೇಶರಾಶಿ ಜಡೆಕಟ್ಟಿ 7 ಅಡಿಯವರೆಗೆ ಬೆಳೆದು ನಿಂತಿದೆ. ಶ್ರೀಗಳು ದಕ್ಷಿಣ ಭಾರತದ ತೀರ್ಥ ಕ್ಷೇತ್ರಗಳ ಯಾತ್ರೆ ಸಂದರ್ಭದಲ್ಲಿ ಉಡುಪಿಗೆ ಬಂದಾಗ ತೆಗೆದ ಚಿತ್ರವಿದು.

**ಚಿತ್ರ- ಬರಹ: ತಾರಾನಾಥ್ ಜೆ ಮೇಸ್ತ, ಶಿರೂರು**





## ಹಾಸಕ್ಕಿಯಲ್ಲಿ ಚಿತ್ತಾರ

ಮೈಲಾರ ಜಾತ್ರೆಯಲ್ಲಿ ಭಕ್ತರು ಹಾಸಕ್ಕಿ ಹಾಕಿ ಪೂಜೆ ಮಾಡುತ್ತಾರೆ. ಗೊರಪ್ಪನ ಬಳಿಯಿರುವ ಕಂಬಳಿ ಹಾಸಿ, ಕಂಬಳಿ ಮೇಲೆ ಶಿಬಾರ ಕಟ್ಟೆ, ತ್ರಿಶೂಲ ಹಾಗೂ ಢಮರುಗದ ಚಿತ್ರವನ್ನು ಅಕ್ಕಿಯಿಂದ ಬಿಡಿಸುತ್ತಾರೆ. ಅದಕ್ಕೆ  ಪೂಜೆ ಸಲ್ಲಿಸಿ ಗೊರಪ್ಪನ ಬಳಿಯಿರುವ ದೋಣಿ ತುಂಬಿಸುತ್ತಾರೆ. ಹೀಗೆ ಭಕ್ತಿ ಭಾವಗಳಿಂದ ಪೂಜೆ ಸಲ್ಲಿಸಿ ಹಲವರು ಕುದುರಿ ಕುಣಿತ ಹಾಕಿ ಚಾವಟಿಯಿಂದ ಹೊಡೆದುಕೊಳ್ಳುತ್ತಾರೆ. ಇನ್ನು ಕೆಲವರು ದೀವಟಿಗೆಯಿಂದ ಬೆಳಕು ಹೊರಡಿಸುತ್ತಾರೆ. ತಮ್ಮ ಹಿರಿಯರು ಮಾಡಿಕೊಂಡು ಬಂದ ಆಚರಣೆಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇದು ಶ್ರೀ ಕ್ಷೇತ್ರ ಮೈಲಾರದಲ್ಲಿ ಜಾತ್ರೆಯ ಸಮಯದಲ್ಲಿ ಕಂಡುಬಂದ ದೃಶ್ಯ.

**-ನಾಗರಾಜನಾಯಕ ಡಿ. ಡೊಳ್ಳಿನ, ಕೊಪ್ಪಳ**

## ನಾಗಮಂಡಲ

ಮೂಕಾಂಬಿಕೆಯ ಕೊಲ್ಲೂರಿನಲ್ಲಿ ಇದೇ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ನಾಗಮಂಡಲೋತ್ಸವ ನಡೆಯಿತು. ಕುಂದಾಪುರದ 30 ಕ್ಕೂ ಹೆಚ್ಚು ದಾನಿಗಳಿಂದ ನಾಗಬನದಲ್ಲಿ ಅಷ್ಟ ಪವಿತ್ರ ನಾಗಮಂಡಲೋತ್ಸವ ಬಹಳ ವಿಜೃಂಭಣೆಯಿಂದ ಜರುಗಿತು. ಅಲ್ಲಿನ ರಂಗೋಲಿ ನಾಗಮಂಡಲ ಸಾವಿರಾರು ಮಂದಿಯನ್ನು ಸೆರೆಹಿಡಿದಿತ್ತು.  ಇದನ್ನು ರಚಿಸಲು ಮೂವರು ನುರಿತ ಪುರೋಹಿತರು 2 ತಾಸು ತೆಗೆದುಕೊಂಡರಂತೆ

**-ಎಸ್.ಪ್ರಭಾವತಿ, ಬೆಂಗಳೂರು**

